ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/80/2014–15

ದಿನಾಂಕ: 26–05–2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| ಶ್ರೀ.ರಾಯಚೂರು ವೀರೇಶ ತಂದೆ ಜಿ ಬಸವರಾಜಪ್ಪ<br>ಮಾನ್ಯರಮಸಲವಾಡ<br>ವಕೀಲರು ;ಎಸ್ ಗುರುಬಸವರಾಜು | 1)ಶ್ರೀಮತಿ ಹಿರಿಯಕ್ಕ ಗಂಡ ಶೇಖರಪ್ಪ ಎಂ ಎಂ ವಾಡ<br>2)ಕಂದಾಯ ನೀರೀಕ್ಷಕರು ಹಡಗಲಿ<br>ವಕೀಲರು ;ಎ ಎನ್ |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಮಾನ್ಯರಮಸಲವಾಡ | 234/ಬಿ | 9.76 |
| | 235/ಬಿ | 5.94 |
| | 398/ಎ | 10.40 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನುಗಳಿಗೆ ಸಂಬಂದಿಸಿದಂತೆ ಶ್ರೀ ಜಿ ಬಸವರಾಜಪ್ಪ ಇವರು ಇವರು ಅರ್ಜಿ ಸಲ್ಲಿಸಿ ತಮ್ಮ ಮಗನಾದ ರಾಯಚೂರು ವೀರೇಶ ಇವರ ಹೆಸರಿಗೆ ಪಾಲು ವಿಭಾಗ ಪತ್ರದ ಮೂಲಕ ಪಟ್ಟಾ ಬದಲಾವಣೆ ಮಾಡಲು ಕೋರಿರುತ್ತಾರೆ..ಈ ಮೇರೆಗೆ ಎಂ ಆರ್ ಸಂಖ್ಯೆ ಹೆಚ್16/2014–15 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗೆ ಶ್ರೀಮತಿ ಹಿರಿಯಕ್ಕ ಇವರು ಮೌಖಿಕವಾಗಿ ತಕರಾರನ್ನು ವ್ಯಕ್ತಪಡಿಸಿ ಹಕ್ಕು ಬದಾಲಾವಣೆ ಮಾಡಬಾರದೆಂದು ಕೋರಿರುತ್ತಾರೆ ಈ ಮೇರೆಗೆ ಕಂದಾಯ ನೀರೀಕ್ಷಕರು ಹಡಗಲಿ ಇವರು ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯಾವಾದಿಗಳ ರವಗೂ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 09/02/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಿಚಾರಣೆಗೆ ವಾದಿಗಳು ಮತ್ತು ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿ ಲಿಖಿತ ಹೇಳಿಕೆಗಳನ್ನು ನೀಡಿರುತ್ತಾರೆ ಶ್ರೀಮತಿ ಹಿರಿಯಕ್ಕ ಇವರು ಮೂಲತ: ಈ ಜಮೀನುಗಳು ತಮ್ಮ ತಂದೆಯವರಾದ ರಾಯಚೂರು ಗವಿಯಪ್ಪ ತಂದೆ ವೀರಭದ್ರಪ್ಪ ಇವರ ಹೆಸರಿನಲ್ಲಿದ್ದು ಶ್ರೀ ಜಿ ಬಸವರಾಜಪ್ಪ ಇವರು ನೈಜ ವಾರಸುದಾರರಾದ ತಾವು ಮತ್ತು ಕಾಳಮ್ಮ,ಪಾರ್ವತಮ್ಮ ಹಾಗು ಅಮಲಾಕ್ಷಮ್ಮ ಇವರುಗಳಿದ್ದರು ಸಹ ಶ್ರೀ ಬಸವರಾಜಪ್ಪ ಇವರು ಕಾನೂನು ಬಾಹಿರವಾಗಿ ತಮ್ಮ ಹೆಸರಿನಲ್ಲಿ ಮೇಲ್ಕಂಡ ಜಮೀನುಗಳನ್ನು ಮಾಡಿಕೊಂಡಿರುತ್ತಾರೆ ಎದು ಆರೋಪಿಸಿ ಪ್ರಕರಣವು ಸಿವಿಲ್ ಸ್ವರೂಪದ್ದಾಗಿರುವುದರಿಂದ ಅರ್ಜಿದಾರರ ಮನವಿಯನ್ನು ವಜಾಗೊಳಿಸಲು ಕೋರಿರುತ್ತಾರೆ.

ವಾದಿ ಪರ ವಕೀಲರಾದ ಎಸ್ ಗುರುಬಸವರಾಜ ಇವರು ಶ್ರೀ ಜಿ ಬಸವರಾಜಪ್ಪ ಇವರು ಮೂಲಪಟ್ಟಾದಾರರಾದ ರಾಯಚೂರು ಗವಿಯಪ್ಪ ಇವರು ಮಾಡಿದ ವಿಲ್ ದಸ್ತಾವೇಜು ಮತ್ತು ದಾನ ಪತ್ರಗಳ ಮೇರೆಗೆ ದಿನಾಂಕ 06/10/1991 ರಂದು ದಾವಾ ಜಮೀನುಗಳ ಪಟ್ಟಾ ಬದಲಾವಣೆ ಮಾಡಿಸಿಕೊಂಡಿದ್ದು,ಸದರಿ ಜಮೀನುಗಳು ಅವರ ಹಕ್ಕು ಸ್ವಾಧೀನಾನುಭವದಲ್ಲಿ ಇರುವುದರಿಂದ ತಕರಾರನ್ನು ವಜಾಗೊಳಿಸಿ ಹಕ್ಕು ಬದಾಲಾವಣೆ ಮಾಡಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳ ವಕೀಲರು ನೀಡಿದ ಲಿಖಿತ ಹೇಳಿಕೆ ಹಾಗೂ ಅವರ ವಾದದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಲಾಗಿ ಅರ್ಜಿದಾತರ ವಕೀಲರ ಹೇಳಿಕೆಯಂತೆ ರಾಯಚೂರು ಗವಿಯಪ್ಪ ತಂದೆ ವೀರಭದ್ರಪ್ಪ ಇವರು ಮಾಡಿರುವ ವಿಲ್ ದಸ್ತಾವೇಜು ಹಾಗು ದಾನಪತ್ರಗಳನ್ನು ಸಕ್ಷಮ ಪ್ರಾಧಿಕಾರವಾದ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿ (PROBATE) ಆದೇಶ ಪಡೆದಂತೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಕಾರಣ ಈಕೆಳಕಂಡ

# ಆದೇಶ

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ವಾದಿ ಮತ್ತು ಪ್ರತಿವಾದಿಗಳು ನೀಡಿದ ಲಿಖಿತ ಹೇಳಿಕೆ ಮೇರೆಗೆ ಮಾನ್ಯರಮಸಲವಾಡ ಗ್ರಾಮದ ಈ ಕೆಳಕಂಡ ಜಮೀನುಗಳ ಪಹಣಿ ದಾಖಲೆಗಳಲ್ಲಿರುವ ನಮೂದುಗಳನ್ನು ಯಥಾಸ್ಥಿತಿಯಲ್ಲಿ ಮುಂದುವರೆಸುತ್ತ ಪ್ರಕರಣ ವಿಲೇಗೊಳಿಸಿ ಆದೇಶಿಸುತ್ತ ವಾದಿ ಮತ್ತು ಪ್ರತಿವಾದಿಗಳು ತಮ್ಮ ವಿವಾದವನ್ನು ಸಿವಿಲ್ ನ್ಯಾಯಲಯದಲ್ಲಿ ಬಗೆಹರಿಸಿಕೊಳ್ಳಲು ಆದೇಶಿಸಿದೆ

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಮಾನ್ಯರಮಸಲವಾಡ | 234/ಬಿ | 9.76 |
| | 235/ಬಿ | 5.94 |
| | 398/ಎ | 10.40 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.